Akashvani : Bengaluru
National Bulletin In Kannada
04.10.2025 : 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

04.10.2025 : 7.35AM

*******

**ಮುಖ್ಯಾಂಶಗಳು :**

1. ನವದೆಹಲಿಯಲ್ಲಿಂದು ೬೨ ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ಯುವ-ಕೇಂದ್ರಿತ ಉಪಕ್ರಮಗಳನ್ನು ಅನಾವರಣಗೊಳಿಸಲಿರುವ ಪ್ರಧಾನಿ ನರೇಂದ್ರ ಮೋದಿ
2. ಛತ್ತೀಸ್‌ಗಢದಲ್ಲಿ ಸುದೀರ್ಘ ಬಸ್ತಾರ್ ದಸರಾ ಆಚರಣೆ; ಇಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗಿ
3. ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಶೇಕಡ ೨೦ರಷ್ಟು ಭರ್ತಿ - ಕೃಷಿ ಸಚಿವಾಲಯ ಘೋಷಣೆ
4. ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್; ಒಟ್ಟು ಪದಕಗಳ ಸಂಖ್ಯೆ ೧೫ಕ್ಕೇರಿಸಿಕೊಂಡ ಭಾರತ

********

ನವದೆಹಲಿಯಲ್ಲಿಂದು ೬೨ ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ವಿವಿಧ ಯುವ-ಕೇಂದ್ರಿತ ಉಪಕ್ರಮಗಳನ್ನು ಪ್ರಧಾನಿ ನರೇಂದ್ರ ಮೋದಿ ಅನಾವರಣಗೊಳಿಸಲಿದ್ದಾರೆ. ಯುವ ಕೌಶಲ್ಯಕ್ಕಾಗಿ ಒಂದು ಐತಿಹಾಸಿಕ ಉಪಕ್ರಮದಲ್ಲಿ, ದೇಶಾದ್ಯಂತ ಒಂದು ಸಾವಿರ ಸರ್ಕಾರಿ ಐಟಿಐಗಳ ಮೇಲ್ದರ್ಜೆಗೇರಿಸುವ ಪಿಎಂ-ಸೇತುಗೆ ಪ್ರಧಾನಿ ಚಾಲನೆ ನೀಡಲಿದ್ದಾರೆ. ಬಿಹಾರದ ಪರಿಷ್ಕೃತ ಮುಖ್ಯಮಂತ್ರಿ ನಿಶ್ಚಯ್ ಸ್ವಯಂ ಸಹಾಯತ ಭಟ್ಟ ಯೋಜನೆಯನ್ನು ಸಹ ಪ್ರಧಾನಿ ಉದ್ಘಾಟಿಸಲಿದ್ದಾರೆ. ಇದು ಐದು ಲಕ್ಷ ಪದವೀಧರರಿಗೆ ಎರಡು ವರ್ಷಗಳ ಕಾಲ ಒಂದು ಸಾವಿರ ರೂಪಾಯಿಗಳ ಮಾಸಿಕ ಭತ್ಯೆಯನ್ನು ಒದಗಿಸುತ್ತದೆ. ಕೈಗಾರಿಕಾ ಆಧಾರಿತ ಕೋರ್ಸ್‌ಗಳು ಮತ್ತು ವೃತ್ತಿಪರ ಶಿಕ್ಷಣವನ್ನು ಉತ್ತೇಜಿಸಲು ಬಿಹಾರದಲ್ಲಿ ಜನ್ ನಾಯಕ್ ಕರ್ಪೂರಿ ಠಾಕೂರ್ ಕೌಶಲ್ಯ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಬಿಹಾರದ ನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಹೊಸ ಶೈಕ್ಷಣಿಕ ಮತ್ತು ಸಂಶೋಧನಾ ಸೌಲಭ್ಯಗಳಿಗೆ ಅವರು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ ಮತ್ತು ಬಿಹ್ತಾದಲ್ಲಿ ಎನ್‌ಐಟಿ ಪಾಟ್ನಾದ ಹೊಸ ಕ್ಯಾಂಪಸ್ ಅನ್ನು ಲೋಕಾರ್ಪಣೆ ಮಾಡಲಿದ್ದಾರೆ. ೩೪ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನವೋದಯ ವಿದ್ಯಾಲಯಗಳು ಮತ್ತು ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಸ್ಥಾಪಿಸಲಾದ ಒಂದು ಸಾವಿರದ ಇನ್ನೂರು ವೃತ್ತಿಪರ ಕೌಶಲ್ಯ ಪ್ರಯೋಗಾಲಯಗಳನ್ನು ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ.

********

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇಂದು ಛತ್ತೀಸ್‌ಗಢಕ್ಕೆ ಭೇಟಿ ನೀಡಲಿದ್ದು, ಜಗದಲ್‌ಪುರದಲ್ಲಿನ ಬಸ್ತಾರ್ ದಸರಾ ಆಚರಣೆಯಲ್ಲಿ ಭಾಗವಹಿಸಲಿದ್ದಾರೆ. ಬಸ್ತರ್ ದಸರಾ ಉತ್ಸವದ ಭಾಗವಾಗಿ ಜಗದಲ್‌ಪುರದಲ್ಲಿ ಆಯೋಜಿಸಲಾದ ಮುರಿಯಾ ದರ್ಬಾರ್‌ನಲ್ಲಿ ಸಚಿವರು ಭಾಗವಹಿಸಲಿದ್ದಾರೆ. ಬಸ್ತಾರ್ ದಸರಾವನ್ನು ವಿಶ್ವದ ಅತ್ಯಂತ ಸುದೀರ್ಘ ಹಬ್ಬವೆಂದು ಪರಿಗಣಿಸಲಾಗಿದೆ, ಇದನ್ನು ಎಪ್ಪತ್ತೈದು ದಿನಗಳವರೆಗೆ ಆಚರಿಸಲಾಗುತ್ತದೆ. ಇದು ಹರೇಲಿ ಅಮವಾಸ್ಯೆಯಂದು ಪ್ರಾರಂಭವಾಗುತ್ತದೆ. ಬಸ್ತರ್ ದಸರಾದ ಸಮಯದಲ್ಲಿ, ಬಸ್ತಾರ್‌ನ ಬುಡಕಟ್ಟು ಸಮುದಾಯದ ಪ್ರಧಾನ ದೇವತೆಯಾದ ದಂತೇಶ್ವರಿ ದೇವಿಗೆ ಪೂಜೆ ಸಲ್ಲಿಸಲಾಗುತ್ತದೆ. ಮುರಿಯಾ ದರ್ಬಾರ್ ಈ ಹಬ್ಬದ ಮುಕ್ತಾಯ ಹಂತವನ್ನು ಸೂಚಿಸುತ್ತದೆ.

ಭೇಟಿಯ ಭಾಗವಾಗಿ ಸಚಿವರು ಮಾತಾ ದಂತೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಲಿದ್ದಾರೆ ಮತ್ತು ಸ್ವದೇಶಿ ಮೇಳ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

********

ಕೃಷಿ ಶಿಕ್ಷಣದಲ್ಲಿ ಪ್ರಮುಖ ಪರಿಹಾರವಾಗಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚವ್ಹಾಣ್, ಕೃಷಿ ವಿಶ್ವವಿದ್ಯಾಲಯಗಳಲ್ಲಿ ಶೇಕಡ ೨೦ರಷ್ಟು ಪದವಿ ಪೂರ್ವ ಸೀಟುಗಳನ್ನು ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ಭರ್ತಿ ಮಾಡುವುದಾಗಿ ಘೋಷಿಸಿದೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿ ಈ ಪರೀಕ್ಷೆಯನ್ನು ಒಂದು ರಾಷ್ಟ್ರ, ಒಂದು ಕೃಷಿ, ಒಂದು ತಂಡ ಎಂಬ ಮನೋಭಾವದೊಂದಿಗೆ ನಡೆಸಲಿದೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ತಿಳಿಸಿದೆ. ಈ ಕ್ರಮ ೧೨ನೇ ತರಗತಿಯಲ್ಲಿ ಜೀವಶಾಸ್ತ್ರ, ರಸಾಯನಶಾಸ್ತ್ರ, ಭೌತಶಾಸ್ತ್ರ, ಗಣಿತ ಮತ್ತು ಕೃಷಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳಿಗೆ ಸಿಯುಇಟಿ - ಐಸಿಎಆರ್ ರಾಷ್ಟ್ರೀಯ ಪ್ರವೇಶ ಪರೀಕ್ಷೆ ಮೂಲಕ ಪ್ರವೇಶ ಪಡೆಯಲು ಅನುವು ಮಾಡಿಕೊಡುತ್ತದೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಶಿವರಾಜ್ ಸಿಂಗ್ ಚವ್ಹಾಣ್, ಈ ನಿರ್ಧಾರದೊಂದಿಗೆ ದೇಶಾದ್ಯಂತ ವಿದ್ಯಾರ್ಥಿಗಳಿಗೆ ಪ್ರವೇಶ ಸರಳ ಮತ್ತು ಏಕರೂಪವಾಗಲಿದೆ. ಇದನ್ನು ೨೦೨೫-೨೬ರ ಶೈಕ್ಷಣಿಕ ವರ್ಷದಿಂದ ಜಾರಿಗೆ ತರಲಾಗುವುದು. ಇದು ಬಿಎಸ್ಸಿ ಕೃಷಿ ಪದವಿಗೆ ಪ್ರವೇಶ ಪಡೆಯುವಲ್ಲಿ ಎದುರಾಗುವ ತೊಡಕುಗಳನ್ನು ನಿವಾರಿಸುತ್ತದೆ ಮತ್ತು ಸುಮಾರು ೩ ಸಾವಿರ ವಿದ್ಯಾರ್ಥಿಗಳಿಗೆ ನೇರವಾಗಿ ಪ್ರಯೋಜನ ನೀಡುತ್ತದೆ ಎಂದು ಹೇಳಿದ್ದಾರೆ.

********

ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚವ್ಹಾಣ್ ಇಂದು ಬಿಹಾರದ ಪಾಟ್ನಾಗೆ ಭೇಟಿ ನೀಡಲಿದ್ದಾರೆ. ಭೇಟಿಯ ವೇಳೆ ಸಚಿವರು, ಪಾಟ್ನಾದಲ್ಲಿ ನಡೆಯುವ ಮಖಾನಾ ಉತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ. ಜತೆಗೆ ರಾಬಿ ಕಾರ್ಯಾಗಾರ ಮತ್ತು ಕೃಷಿ ಸಲಹಾ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಇದೇ ವೇಳೆ ರೈತರು, ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರೊಂದಿಗೆ ಸಚಿವರು ಸಸಿ ನೆಡುವ ಕಾರ್ಯಕ್ರಮದಲ್ಲೂ ಪಾಲ್ಗೊಳ್ಳಲಿದ್ದಾರೆ.

********

ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯಾನಕ ಮಾನವ ಹಕ್ಕುಗಳ ಉಲ್ಲಂಘನೆಗೆ ಪಾಕಿಸ್ತಾನವನ್ನು ಹೊಣೆಗಾರರನ್ನಾಗಿ ಮಾಡಬೇಕು ಎಂದು ಭಾರತ ಹೇಳಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ನವದೆಹಲಿಯಲ್ಲಿ ನಿನ್ನೆ ನಡೆದ ಮಾಧ್ಯಮಗೋಷ್ಠಿಯಲ್ಲಿ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

********

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಚುನಾವಣಾ ಆಯೋಗ ತಂಡ ಮುಂಬರುವ ಬಿಹಾರ ವಿಧಾನಸಭಾ ಚುನಾವಣೆಯ ಸಿದ್ಧತೆಗಳನ್ನು ಪರಿಶೀಲಿಸಲು ಎರಡು ದಿನಗಳ ಭೇಟಿಗಾಗಿ ಪಾಟ್ನಾಗೆ ಆಗಮಿಸಿದೆ. ನಿಯೋಗದಲ್ಲಿ ಚುನಾವಣಾ ಆಯುಕ್ತರಾದ ಡಾ. ಸುಖ್‌ಬೀರ್ ಸಿಂಗ್ ಸಂಧು ಮತ್ತು ಡಾ. ವಿವೇಕ್ ಜೋಶಿ ಸೇರಿದ್ದಾರೆ. ಇಂದು ಭೇಟಿಯ ಮೊದಲ ದಿನದಂದು, ತಂಡವು ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ಸಲಹೆಗಳನ್ನು ಆಲಿಸಲಿದೆ. ನಂತರ, ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ವ್ಯವಸ್ಥೆಗಳನ್ನು ಪರಿಶೀಲಿಸಲು ಆಯೋಗವು ಆಡಳಿತ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಸರಣಿ ಸಭೆಗಳನ್ನು ನಡೆಸಲಿದೆ.

********

ಪಾಕಿಸ್ತಾನವು ಯಾವುದೇ ಹೊಸ ದುಷ್ಕೃತ್ಯವನ್ನು ಪ್ರಯತ್ನಿಸಿದರೆ, ಅದು ಭೂಮಿಯ ಮೇಲೆ ತನ್ನ ಅಸ್ಥಿತ್ವ ಉಳಿಸಿಕೊಳ್ಳುವುದು ಅಥವಾ ಇತಿಹಾಸವಾಗುವುದು ಎಂಬ ಎರಡು ಆಯ್ಕೆಗಳಲ್ಲಿ ಒಂದನ್ನು ಆರಿಸಬೇಕಾಗುತ್ತದೆ ಎಂದು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಎಚ್ಚರಿಸಿದ್ದಾರೆ. ರಾಜಸ್ಥಾನದ ಗಂಗಾನಗರದ ಬಳಿಯ ಗಡಿ ಗ್ರಾಮದಲ್ಲಿರುವ ಸೇನಾ ಠಾಣೆಯಲ್ಲಿ ನಿನ್ನೆ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, ಪಾಕಿಸ್ತಾನದಲ್ಲಿ ಭಯೋತ್ಪಾದಕ ಗುಂಪುಗಳು ಬಳಸುತ್ತಿದ್ದ ಒಂಬತ್ತು ಸ್ಥಳಗಳನ್ನು ನಾಶಮಾಡಲು ಕಾರಣವಾದ ಆಪರೇಷನ್ ಸಿಂದೂರ್‌ನ ಯಶಸ್ಸಿನ ಕುರಿತು ಪ್ರಸ್ತಾಪಿಸಿದರು.

********

ಏರ್ ಚೀಫ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರ ನಕಲಿ ಎಐ ರಚಿತ ವಿಡಿಯೋವನ್ನು ಸರ್ಕಾರ ನಿರಾಕರಿಸಿದೆ. ಈ ವಿಡಿಯೋ ನಕಲಿ ಮತ್ತು ಡಿಜಿಟಲ್ ತಂತ್ರಜ್ಞಾನದ ಮೂಲಕ ಮಾರ್ಪಾಡು ಮಾಡಲಾಗಿದೆ. ಅದರಲ್ಲಿರುವ ಯಾವುದೇ ಹೇಳಿಕೆಯನ್ನು ಏರ್ ಚೀಫ್ ಮಾರ್ಷಲ್ ನೀಡಿಲ್ಲ ಎಂದು ಪಿಐಬಿಯ ಸತ್ಯ ಶೋಧನಾ ಘಟಕ ಸ್ಪಷ್ಟಪಡಿಸಿದೆ.

********

ಖಾಸಗಿ ರೇಡಿಯೋ ಪ್ರಸಾರಕರಿಗೆ ಡಿಜಿಟಲ್ ರೇಡಿಯೋ ಪ್ರಸಾರ ನೀತಿಯನ್ನು ರೂಪಿಸುವ ಕುರಿತು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ - ಟ್ರಾಯ್ ತನ್ನ ಶಿಫಾರಸುಗಳನ್ನು ಬಿಡುಗಡೆ ಮಾಡಿದೆ. ದೆಹಲಿ, ಮುಂಬೈ, ಕೋಲ್ಕತ್ತಾ ಮತ್ತು ಚೆನ್ನೈ ಎಂಬ ನಾಲ್ಕು ಎ+ ವರ್ಗದ ನಗರಗಳು ಮತ್ತು ಹೈದರಾಬಾದ್, ಬೆಂಗಳೂರು, ಅಹಮದಾಬಾದ್, ಸೂರತ್, ಪುಣೆ, ಜೈಪುರ, ಲಕ್ನೋ, ಕಾನ್ಪುರ ಮತ್ತು ನಾಗ್ಪುರದ ಒಂಬತ್ತು ಎ ವರ್ಗದ ನಗರಗಳಲ್ಲಿ ಡಿಜಿಟಲ್ ರೇಡಿಯೋ ಪ್ರಸಾರ ಸೇವೆಯನ್ನು ಪ್ರಾರಂಭಿಸಲು ಮೀಸಲು ಬೆಲೆಯನ್ನು ಸಹ ಶಿಫಾರಸು ಮಾಡಿದೆ. ನೂತನ ಪ್ರಸಾರಕರು ಡಿಜಿಟಲ್ ರೇಡಿಯೋ ಸೇವೆಗಳನ್ನು ಸಿಮಲ್‌ಕಾಸ್ಟ್ ಮೋಡ್‌ನಲ್ಲಿ ಪ್ರಾರಂಭಿಸಬೇಕೆಂದು ಟ್ರಾಯ್ ಶಿಫಾರಸು ಮಾಡಿದೆ. ಅಸ್ತಿತ್ವದಲ್ಲಿರುವ ಅನಲಾಗ್ ಎಫ್‌ಎಂ ರೇಡಿಯೋ ಪ್ರಸಾರಕರನ್ನು ಸ್ವಯಂಪ್ರೇರಿತ ಆಧಾರದ ಮೇಲೆ ಸಿಮಲ್‌ಕಾಸ್ಟ್ ಮೋಡ್‌ಗೆ ತೆರಳಲು ಅನುಮತಿಸಬೇಕು. ಡಿಜಿಟಲ್ ರೇಡಿಯೋ ಪ್ರಸಾರಕ್ಕಾಗಿ ಅಧಿಕಾರ ಅವಧಿ ೧೫ ವ?ಗಳಾಗಿರಬೇಕು ಎಂದು ಸಹ ಶಿಫಾರಸು ಮಾಡಿದೆ. ಪ್ರಸಾರ ಭಾರತಿ ತನ್ನ ಭೂಮಿ ಮತ್ತು ಟವರ್ ಮೂಲಸೌಕರ್ಯ ಹಾಗೂ ಸಾಮಾನ್ಯ ಪ್ರಸರಣ ಮೂಲಸೌಕರ್ಯವನ್ನು ಖಾಸಗಿ ಪ್ರಸಾರಕರೊಂದಿಗೆ ರಿಯಾಯಿತಿ ಬಾಡಿಗೆ ದರದಲ್ಲಿ ಹಂಚಿಕೊಳ್ಳಬೇಕು ಮತ್ತು ಕಾರ್ಯಾಚರಣೆಯ ವೆಚ್ಚಗಳನ್ನು ಸಂಪೂರ್ಣವಾಗಿ ತೆಗೆದುಕೊಳ್ಳಬೇಕು ಎಂದು ಪ್ರಾಧಿಕಾರ ತಿಳಿಸಿದೆ.

********

ನವದೆಹಲಿಯಲ್ಲಿ ನಡೆಯುತ್ತಿರುವ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ, ನಿನ್ನೆ ಎರಡು ಚಿನ್ನ ಮತ್ತು ಎರಡು ಕಂಚು ಸೇರಿದಂತೆ ನಾಲ್ಕು ಪದಕಗಳನ್ನು ಗೆದ್ದಿದ್ದು, ಒಟ್ಟಾರೆ ಪದಕಗಳ ಸಂಖ್ಯೆ ೧೫ಕ್ಕೆ ಏರಿದೆ. ಭಾರತೀಯ ಪ್ಯಾರಾ-ಅಥ್ಲೀಟ್ ನಿಶಾದ್ ಕುಮಾರ್ ಪುರು?ರ ಹೈಜಂಪ್ ಟಿ-೪೭ ರ ವಿಭಾಗದಲ್ಲಿ ತಮ್ಮ ಮೊದಲ ಚಿನ್ನದ ಪದಕವನ್ನು ಗೆದ್ದರೆ, ಸಿಮ್ರಾನ್ ಶರ್ಮಾ ಮಹಿಳೆಯರ ೧೦೦ ಮೀಟರ್ ಟಿ-೧೨ ಓಟ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನು ಗೆದ್ದರು. ಮತ್ತೊಂದೆಡೆ, ಪರ್ದೀಪ್ ಕುಮಾರ್ ಪುರು?ರ ಡಿಸ್ಕಸ್ ಥ್ರೋ ಎಫ್-೬೪ ರ ಸ್ಪರ್ಧೆಯಲ್ಲಿ ಕಂಚಿನ ಪದಕವನ್ನು ಗೆದ್ದರೆ, ಪ್ರೀತಿ ಪಾಲ್ ಮಹಿಳೆಯರ ೨೦೦ ಮೀಟರ್ ಟಿ-೩೫ರ ಸ್ಪರ್ಧೆಯಲ್ಲಿ ಪದಕವನ್ನು ಗೆದ್ದರು. ಇದರೊಂದಿಗೆ, ಭಾರತ ಪ್ರಸ್ತುತ ಆರು ಚಿನ್ನ, ಐದು ಬೆಳ್ಳಿ ಮತ್ತು ನಾಲ್ಕು ಕಂಚಿನೊಂದಿಗೆ ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಬ್ರೆಜಿಲ್ ೧೨ ಚಿನ್ನ ಸೇರಿದಂತೆ ೩೭ ಪದಕಗಳೊಂದಿಗೆ ಅಗ್ರಸ್ಥಾನದಲ್ಲಿದೆ, ಚೀನಾ ಒಂಬತ್ತು ಚಿನ್ನದ ಪದಕ ಸೇರಿದಂತೆ ೩೮ ಪದಕಗಳೊಂದಿಗೆ ಮತ್ತು ಪೋಲೆಂಡ್ ಎಂಟು ಚಿನ್ನ ಸೇರಿದಂತೆ ೧೫ ಪದಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

********

ಪ್ಯಾಲೆಸ್ಟೀನಿಯನ್ ಸಶಸ್ತ್ರ ಗುಂಪು ಹಮಾಸ್ ಉಳಿದ ಎಲ್ಲಾ ಇಸ್ರೇಲಿ ಒತ್ತೆಯಾಳುಗಳನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿದೆ ಆದರೆ ಅಮೆರಿಕದ ಶಾಂತಿ ಯೋಜನೆಯಲ್ಲಿ ವಿವರಿಸಿರುವ ಹಲವಾರು ಪ್ರಮುಖ ಅಂಶಗಳ ಕುರಿತು ಹೆಚ್ಚಿನ ಮಾತುಕತೆಗಳನ್ನು ಬಯಸುವುದಾಗಿ ತಿಳಿಸಿದೆ. ವಿನಿಮಯಕ್ಕೆ ಸರಿಯಾದ ಷರತ್ತುಗಳನ್ನು ಪೂರೈಸಿದರೆ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರಸ್ತಾವನೆಯಲ್ಲಿರುವ ವಿನಿಮಯ ಸೂತ್ರದ ಪ್ರಕಾರ, ಜೀವಂತ ಮತ್ತು ಸತ್ತ ಎಲ್ಲಾ ಇಸ್ರೇಲಿ ಕೈದಿಗಳನ್ನು ಬಿಡುಗಡೆ ಮಾಡಲು ಒಪ್ಪಿಕೊಂಡಿರುವುದಾಗಿ ಹಮಾಸ್ ಗುಂಪು ಹೇಳಿಕೆಯಲ್ಲಿ ತಿಳಿಸಿದೆ. ಈ ನಡುವೆ, ಗಾಜಾದ ಭವಿಷ್ಯ ಮತ್ತು ಪ್ಯಾಲೆಸ್ಟೀನಿಯನ್ನರ ಹಕ್ಕುಗಳಿಗೆ ಸಂಬಂಧಿಸಿದ ಇತರ ವಿಷಯಗಳ ಕುರಿತು ಹಮಾಸ್ ಮತ್ತಷ್ಟು ಮಾತುಕತೆ ನಡೆಸಲು ಪ್ರಯತ್ನಿಸುತ್ತಿದೆ. ಅಧ್ಯಕ್ಷ ಟ್ರಂಪ್ ೨೦ ಅಂಶಗಳ ಶಾಂತಿ ಯೋಜನೆಯನ್ನು ಒಪ್ಪಿಕೊಳ್ಳಲು ಅಥವಾ ದಾಳಿ ಎದುರಿಸಲು ಹಮಾಸ್‌ಗೆ ನಾಳೆಗೆ ಗಡುವು ನೀಡಿದ ನಂತರ ಈ ಘೋಷಣೆ ಬಂದಿದೆ. ಹಮಾಸ್‌ನ ಹೇಳಿಕೆ ಬೆನ್ನಲ್ಲೇ ಅಧ್ಯಕ್ಷ ಟ್ರಂಪ್, ಒತ್ತೆಯಾಳುಗಳನ್ನು ಸುರಕ್ಷಿತವಾಗಿ ಮತ್ತು ತ್ವರಿತವಾಗಿ ಹೊರತರಲು ಗಾಜಾದ ಮೇಲೆ ಬಾಂಬ್ ದಾಳಿಯನ್ನು ತಕ್ಷಣವೇ ನಿಲ್ಲಿಸುವಂತೆ ಇಸ್ರೇಲ್‌ಗೆ ಕರೆ ನೀಡಿದರು.

****END****